# ಆಹಾ ಸುದ್ದಿ!

★ ಸಸಿತೋಟ

ಜೋಹಾನ್ಸ್‌ಬರ್ಗ್‌ನಲ್ಲಿ ಈಗ ಅಜ್ಜಿಯರ ಬಾಕ್ಸಿಂಗ್ ನಡೆಯುತ್ತಿದೆ. 70–80 ವರ್ಷ ವಯಸ್ಸಿನ ವೃದ್ಧೆಯರು ಅಖಾಡಕ್ಕಿಳಿಯುವ ಮುನ್ನವೇ ಕಸರತ್ತು ನಡೆಸಿ ಬೆವರಿಳಿಸುತ್ತಿದ್ದಾರಂತೆ. ಎಳೆಯ ಪ್ರಾಯದಲ್ಲಾದರೂ ಕಲಿತಿದ್ದರೆ ಗಂಡಂದಿರನ್ನು ಹದ್ದುಬಸ್ತಿನಲ್ಲಿಡಬಹುದಿತ್ತು ಎಂದು ಎಷ್ಟು ಮಂದಿ ಅಜ್ಜಿಯರು ಹಳಹಳಿಸುತ್ತಿದ್ದಾರೋ!



ಹುಟ್ಟುಹಬ್ಬವನ್ನು ಒಂಟಿಯಾಗಿ ಆಚರಿಸಲು ಬೇಸರವಾದರೆ ಯಾವುದೋ ಒಂದು ದೂರನ್ನು ಹಿಡಿದುಕೊಂಡು ಮುಂಬೈನ ಪೊಲೀಸ್ ಠಾಣೆಗೆ ತೆರಳಬಹುದು. ಅಲ್ಲಿಯ ಪೊಲೀಸರು ನಿಮ್ಮಿಂದ ದೂರು ಬರೆಸಿಕೊಳ್ಳುವಾಗ ನಿಮ್ಮ ಹುಟ್ಟಿದ ದಿನಾಂಕ ನೋಡಿ ಕೇಕ್ ತರಿಸಿ ಸಂಭ್ರಮಪಡುತ್ತಾರಂತೆ. ಈಚೆಗೆ ಅನೀಶ್ ಎಂಬಾತನಿಗೆ ಈ ಅಚಾನಕ್ ಜನ್ಮದಿನದ ಸಂಭ್ರಮಾಚರಣೆಯ ಉಡುಗೊರೆ ಸಿಕ್ಕಿದ್ದು, ಕೇಕ್ ಹಣದ ಬಗ್ಗೆ ತಲೆ ಬಿಸಿ ಮಾಡಿಕೊಳ್ಳುವವರು ಈಗ ಯಾವ ದೂರು ಕೊಡಬಹುದು ಎಂಬ ಬಗ್ಗೆ ತಲೆ ಬಿಸಿ ಮಾಡಿಕೊಳ್ಳುತ್ತ ಕೂರಬಹುದು.



ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸೆಲೆಬ್ರಿಟಿಗಳ ಬೆನ್ನು ಹತ್ತುವ ಪಾಪರಾಜಿ (ಛಾಯಾಗ್ರಾಹಕ)ಗಳ ಹಾವಳಿ ಜಾಸ್ತಿಯಾಗಿದ್ದು ಗೊತ್ತೇ ಇದೆ. ಆದರೆ ಪಾಪ, ಅವರನ್ನು ಈಗ ನಾಯಿಗಳಿಗೆ ಹೋಲಿಸಿ ಅಮೆರಿದ ವೃತ್ತವೊಂದರಲ್ಲಿ ದೊಡ್ಡ ಗಾತ್ರದ ಪ್ರತಿಮೆಗಳನ್ನು ನಿಲ್ಲಿಸಲಾಗಿದೆ. ಅಷ್ಟೇ ಅಲ್ಲ, ಹೆಸರನ್ನೂ ನೀಡಲಾಗಿದ್ದು ಈಗ ಯಾರ್ಯಾರು ತಮ್ಮ ತಮ್ಮ ಮೂತಿ ಮುಟ್ಟಿ ನೋಡಿಕೊಳ್ಳುತ್ತಿದ್ದಾರೋ!

ಇಂಡೋನೇಷ್ಯಾದಲ್ಲಿ ಹೀಗೊಂದು ಭಾರಿ ಹೊಡೆದಾಟ ನಡೆಸುವ ಸಂಪ್ರದಾಯವಿದೆಯಂತೆ. ಒಂದು ಕಡೆ ಕಾಡು ಹಂದಿ ತೋಳೇರಿಸಿದರೆ, ಇನ್ನೊಂದು ಕಡೆ ಬಡಪಾಯಿ ಬೀದಿ ನಾಯಿ ಹಿಂಗಾಲ ಮಧ್ಯೆ ಬಾಲ ತೂರಿಸಿಕೊಂಡು ಕಾದಾಡುತ್ತದೆ. ಮನುಷ್ಯರ ನಡುವಿನ ಅಸಮಾನತೆ ಈ ರೀತಿ ಪ್ರಾಣಿಗಳವರೆಗೂ ವಿಸ್ತರಿಸಬಾರದಿತ್ತು.





ಇಟಲಿಯ ಯುವತಿಯೊಬ್ಬಳು ತಾನು ಕೆಲಸ ಮಾಡುವ ಕಂಪೆನಿಯಿಂದ ಎರಡು ದಿನ ವೈದ್ಯಕೀಯ ರಜೆ ಪಡೆಯಲು ಯಶಸ್ವಿಯಾಗಿದ್ದಾಳಂತೆ. ಆದರೆ ಕಾಯಿಲೆ ಬಿದ್ದಿದ್ದು ಆಕೆಯಲ್ಲ, ಆಕೆಯ ಮುದ್ದಿನ ಸಾಕು ನಾಯಿ. ಆಕೆ ಕೋರ್ಟಿಗೆ ಹೋಗಿ ಈ ಸವಲತ್ತು ಪಡೆದಿದ್ದು, ಇನ್ನು ಮುಂದೆ ನಾಯಿ–ಬೆಕ್ಕಿನ ಸಲುವಾಗಿ ಅಜ್ಜಿಯೋ, ಅಜ್ಜನೋ, ಕೊನೆಗೆ ಗಂಡನೋ ಕಾಯಿಲೆ ಬಿದ್ದಿದ್ದಾರೆ ಎಂದು ನೆವ ಹೇಳುವ ತಾಪತ್ರಯ ತಪ್ಪಿದಂತಾಗಿದೆ.

ಚೀನಾದ ಹೆದ್ದಾರಿಯೊಂದರ ಪಕ್ಕದಲ್ಲಿ ಪಟ್ಟಾಗಿ ಮರವೇರಿ ಕುಳಿತಿರುವ ಈ ಕಾರು ದಾರಿಹೋಕರನ್ನು ಚಕಿತಗೊಳಿಸುತ್ತಿದ್ದು, ಸಾಮಾಜಿಕ ಜಾಲತಾಣದಲ್ಲೂ ವೈರಲ್ ಆಗಿದೆ. ಮೇಲಿಂದ ಬಿದ್ದಿದ್ದಲ್ಲ, ಕೆಳಗೆ ರಸ್ತೆಯಲ್ಲಿ ಹೋಗುತ್ತಿದ್ದಾಗಲೇ ಹೈ ಜಂಪ್ ಹೊಡೆದಿದೆಯಂತೆ. ಯಾವ ಮಾಡೆಲ್ ಕಾರೋ! ಬೆಂಗಳೂರಿನ ಗುಂಡಿಗಳಿಗೆ ಹೇಳಿ ಮಾಡಿಸಿದಂತಿದೆ ಈ ಕಾರು.